**ಸಾಕ್ಷಿಯನ್ನು ದಿಃ 10.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಪಿ.ಎಲ್.ಕೆ ವಕೀಲರಿಂದಃ-**

ನಾನು ತಿಮ್ಮೆಗೌಡರಿಂದ ಜಮೀನು ತೆಗೆದುಕೊಂಡಿದ್ದೇನೆ ಎಂದು ಹೇಳಿದ್ದ ಜಮೀನುಗಳ ಸರ್ವೆ ನಂ. 72/3 ರಲ್ಲಿ 11 ಗುಂಟೆ, ಸರ್ವೆ ನಂ. 72/5 ರಲ್ಲಿ 2 ಎಕರೆ 2 ಗುಂಟೆ, ಸರ್ವೆ ನಂ. 72/6 ಹೊಸ ಸರ್ವೆ ನಂ. 72/11 ರಲ್ಲಿ 1 ಎಕರೆ, ಸರ್ವೆ ನಂ. 72/7 ರಲ್ಲಿ 1 ಎಕರೆ, 1 ಗುಂಟೆ, ಸರ್ವೆ ನಂ. 72/8 ರಲ್ಲಿ 1 ಎಕರೆ, 1 ಗುಂಟೆ, ಸರ್ವೆ ನಂ. 72/9 ಮತ್ತು ಸರ್ವೆ ನಂ. 72/13 ರಲ್ಲಿ 1 ಎಕರೆ, 72/10 ರಲ್ಲಿ 28 ಅಥವಾ 38 ಗುಂಟೆ ಮತ್ತು 72/15 ರಲ್ಲಿ 14 ಗುಂಟೆ, ಒಟ್ಟು 6 ಎಕರೆ 28 ಗುಂಟೆ ಖರೀದಿ ಮಾಡಿದ ಜಮೀನು ಇರುತ್ತದೆ. ಸದರಿ ಜಮೀನುಗಳನ್ನು ನೋಡಿದ್ದೇನೆ, ಅವುಗಳ ಸ್ವಾಧೀನದಲ್ಲಿ ನಾನೆ ಇದ್ದೇನೆ. ಸದರಿ ಜಮೀನುಗಳ ಚಕ್ಕುಬಂದಿ ನನಗೆ ಗೊತ್ತು. ಸರ್ವೆ ನಂ 72/3 ರ ಚಕ್ಕುಬಂದಿ ಪೂರ್ವಕ್ಕೆ ಸ್ವಾಮಾಚಾರಿ ರವರ ಜಮೀನು, ಪಶ್ಚಿಮಕ್ಕೆ, ಉತ್ತರಕ್ಕೆ ದಕ್ಷಿಣಕ್ಕೆ ಪುಟ್ಟ ಲಕ್ಷ್ಮಮ್ಮನ ಮಕ್ಕಳ ಜಮೀನು ಇರುತ್ತದೆ. ಸರ್ವೆ ನಂ. 72/5 ರ ಲ್ಲಿ ಚಕ್ಕುಬಂದಿ ಪೂರ್ವಕ್ಕೆ 72/6 ರ ಚೂಡಾರತ್ನ ರವರ ಜಮೀನು ಪಶ್ಚಿಮಕ್ಕೆ ದೇವ ಕುಮಾರ ರವರ ಜಮೀನು, ಉತ್ತರಕ್ಕೆ ಪುಟ್ಟ ಲಕ್ಷ್ಮಮ್ಮನ ಮಕ್ಕಳ ಜಮೀನು, ದಕ್ಷಿಣಕ್ಕೆ ಸರ್ವೆ ನಂ. 8 ರಲ್ಲಿರುವ ಉಳಿಕೆ ನನ್ನ ಜಮೀನು ಇರುತ್ತದೆ.

ಸರ್ವೆ ನಂ. 72/6 ಹೊಸ ಸರ್ವೆ ನಂ. 72/11 ರ ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸರ್ವೆ ನಂ. 72/5 ರನನ್ನ ಜಮೀನು, ಉತ್ತರಕ್ಕೆ ಚೂಡಾರತ್ನ ರವರ ಜಮೀನು ದಕ್ಷಿಣಕ್ಕೆ ಸರ್ವೆ ನಂ. 7 ರಲ್ಲಿನ ನನ್ನದೆ ಜಮೀನು. ಸರ್ವೆ ನಂ.72/7 ರಲ್ಲಿ ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸರ್ವೆ ನಂ.72/8 ರ ನನ್ನ ಜಮೀನು, ಉತ್ತರಕ್ಕೆ ಸರ್ವೆ ನಂ.72/6 ಮತ್ತು 11 ರ ನನ್ನದೆ ಜಮೀನು, ದಕ್ಷಿಣಕ್ಕೆ ಸರ್ವೆ ನಂ.72/10 ರ ನನ್ನದೆ ಜಮೀನು ಇರುತ್ತದೆ. ಸರ್ವೆ ನಂ. 72/8 ರಲ್ಲಿ ಚಕ್ಕುಬಂದಿ ಪೂರ್ವಕ್ಕೆ ನನ್ನದೆ ಜಮೀನು, ಸರ್ವೆ ನಂ. 72/9 ರ ಚಕ್ಕುಬಂದಿಯಲ್ಲಿ ಪೂರ್ವಕ್ಕೆ ಸರ್ವೆ ನಂ. 72/10 ರ ಜಮೀನು. ದಕ್ಷಿಣಕ್ಕೆ ಗೋಪಾಲ ರಾಜು ರವರ ಜಮೀನು. ಸರ್ವೆ ನಂ. 72/10, 72/13, 72/15 ರ ಜಮೀನುಗಳ ಚಕ್ಕುಬಂದಿಯಲ್ಲಿ ದಕ್ಷಿಣಕ್ಕೆ ಏನೇದೆ ಎಂದರೆ ಸರ್ವೆ ನಂ. 72/13 ನನ್ನದೆ ಜಮೀನು ಸರ್ವೆ ನಂ. 72/9 ಇರುತ್ತದೆ. ಸರ್ವೆ ನಂ. 72/10

ರ ದಕ್ಷಿಣಕ್ಕೆ ನನ್ನದೆ ಸರ್ವೆ ನಂ. 72/15 ಇರುತ್ತದೆ. ಸರ್ವೆ ನಂ. 72/15 ರಲ್ಲಿ ದಕ್ಷಿಣಕ್ಕೆ ಹಲಗಶೆಟ್ಟಿ ರವರ ಜಮೀನು ಇರುತ್ತದೆ. ಸದರಿ ಮೇಲೆ ಹೇಳಿದ ಜಮೀನುಗಳು ಮೂಲತಃ ಕರೀಗೌಡರ ಮಗ ತಿಮ್ಮೇಗೌಡರಿಗೆ ಸೇರಿದ ಜಮೀನುಗಳು. ಸದರಿ ಜಮೀನುಗಳನ್ನು ಖರೀದಿ ಮಾಡುವ ಪೂರ್ವದಲ್ಲಿ ನಮ್ಮ ಊರಿನ ಚಂದ್ರು ಎಂಬುವವರು ನನಗೆ ತೋರಿಸಿದ್ದರು.

ತಿಮ್ಮೇಗೌಡರಿಂದ ಖರೀದಿ ಮಾಡಿದ ಜಮೀನುಗಳನ್ನು ಹೊರತುಪಡಿಸಿ ಸದರಿ ಜಮೀನುಗಳ ಅಕ್ಕ ಪಕ್ಕ ನನಗೆ ಸೇರಿದ ಬೇರೆ ಯಾವುದೆ ಜಮೀನುಗಳು ಇರುವುದಿಲ್ಲ. ಕರೀಗೌಡರಿಗೆ 4 ಜನ ಮಕ್ಕಳು ಅವರುಗಳೆಂದರೆ ತಿಮ್ಮಗೌಡ, ಪುಟ್ಟ ಲಕ್ಷ್ಮಮ್ಮ, ತುಳಸಮ್ಮ ಮತ್ತು ಸಾವಿತ್ರಮ್ಮ. ಕರೀಗೌಡರ ಸದರಿ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ನಾನು ಖರೀದಿ ಮಾಡುವಾಗ ತಿಮ್ಮೇಗೌಡ ರವರ ಸಹೋದರಿಯರ ನಡುವೆ ವಿಭಾಗ ಆಗಿತ್ತೊ ಇಲ್ಲವೊ ನನಗೆ ಗೊತ್ತಿಲ್ಲ. ಖರೀದಿ ಮಾಡುವ ಸಮಯದಲ್ಲಿ ತಿಮ್ಮೇಗೌಡನ ಸಹೋದರಿಯರನ್ನು ವಿಚಾರಿಸಿರುವುದಿಲ್ಲ ಎಂದರೆ ಸಾಕ್ಷಿ ವಿಚಾರಿಸಿಲ್ಲ ಆದರೆ ನಾನು ಖರೀದಿಸುವ ವಿಚಾರ ಊರಿನ ಜನಕ್ಕೆಲ್ಲ ಗೊತ್ತಿತ್ತು ಎನ್ನುತ್ತಾರೆ. ತಿಮ್ಮೇಗೌಡರಿಗೆ ಸದರಿ ಜಮೀನುಗಳು ಹೇಗೆ ಬಂತು ಎಂದು ಕಂದಾಯ ದಾಖಲೆಗಳನ್ನು ನಾನು ತೆಗೆದುಕೊಂಡಿದ್ದೆ. ಖರೀದಿ ಮಾಡುವ ಪೂರ್ವದಲ್ಲಿ ವಕೀಲರಿಂದ ಕಾನೂನು ಅಭಿಪ್ರಾಯ ಪಡೆದಿಲ್ಲ, ಅದರೆ ಇ.ಸಿ ಪಡೆದಿದ್ದೆ ಎನ್ನುತ್ತಾರೆ. ಹಾಗೆ ಖರೀದಿ ಮಾಡುವ ಪೂರ್ವದಲ್ಲಿ ಸಾರ್ವಜನಿಕ ಪ್ರಕಟಣೆ ಪ್ರಚಾರ ಪಡೆಸಿಲ್ಲ.

ಕ್ರಯಪತ್ರ ಬರೆದುಕೊಡುವ ಪೂರ್ವದಲ್ಲಿ 3 ನೇ ಪ್ರತಿವಾದಿ ಕ್ರಯದ ಕರಾರು ಬರೆದುಕೊಟ್ಟಿದ್ದರು. ಸೇಲ್ ಅಗ್ರಿಮೆಂಟ್ ಮಾಡಿಕೊಟ್ಟ ನಂತರ ರಿಜಿಸ್ಟರ್ ಮಾಡಿ ಕೊಡದ ಕಾರಣ ಓ.ಎಸ್ 55/2015 ರಂತೆ ದಾವೆ ಹಾಕಿದ್ದೆ. ಆ ಕೇಸ್ ನಲ್ಲಿ ತಿಮ್ಮೇಗೌಡ ಸಹೋದರಿಯರನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇತ್ತಾ ಎಂದರೆ ನನಗೆ ಗೊತ್ತಿರಲಿಲ್ಲ ಆದ್ದರಿಂದ ಮಾಡಿರಲಿಲ್ಲ ಎನ್ನುತ್ತಾರೆ. ಅಗ್ರಿಮೆಂಟ್ ಪ್ರಕಾರ ಒಟ್ಟು 12 ಲಕ್ಷ ರೂ. ಗಳಲ್ಲಿ ಒಟ್ಟು 8 ಲಕ್ಷ ರೂ. ಹಣವನ್ನು ನಗದಾಗಿ ಕೊಟ್ಟಿದ್ದೆ. ನಾನು ಮತ್ತು ತಿಮ್ಮೇಗೌಡ ರವರು ಮಾಡಿಕೊಂಡ ದಿಃ 29.09.2012 ರ ಕ್ರಯ ಕರಾರು ಪತ್ರವನ್ನು ಇಬ್ಬರೂ ಸೇರಿ ಸೃಷ್ಟಿ ಮಾಡಿಕೊಂಡಿದ್ದು, ಯಾವುದೆ ಹಣ

ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ತಿಮ್ಮೇಗೌಡ ಇಬ್ಬರೂ ಸೇರಿ ಓ.ಎಸ್ 55/2015 ರಲ್ಲಿ ಇಬ್ಬರೂ ಷಾಮಿಲಾಗಿ ನ್ಯಾಯಾಲಯದಿಂದ ಡಿಕ್ರಿ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. EX 12/2016 ರ ಅಮಲ್ಜಾರಿ ಅರ್ಜಿಯಲ್ಲಿ ಸ್ವತ್ತುಗಳ ಭೌತಿಕ ಸ್ವಾಧೀನವನ್ನು ಪಡೆದುಕೊಂಡಿಲ್ಲ ಎಂದರೆ ಕೋರ್ಟ್ ಅಮೀನರ ಮೂಲಕ ಪಡೆದುಕೊಂಡಿದ್ದೇನೆ ಎನ್ನುತ್ತಾರೆ. ಆ ಸಮಯದಲ್ಲಿ ಸ್ವಾಧೀನದಲ್ಲಿ ವಾದಿಗಳು ಇದ್ದರು ಎಂದು ಗಲಾಟೆ ಆಗಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ತಿಮ್ಮೇಗೌಡರೆ ಸ್ವಾಧೀನದಲ್ಲಿ ಇದ್ದರು ಎನ್ನುತ್ತಾರೆ. ಸದರಿ ಅಮಲ್ಜಾರಿ ಕೇಸಿನಲ್ಲಿ ವಾದಿಗಳು ತಾವೆ ಸ್ವಾಧೀನದಲ್ಲಿ ಇರುವುದಾಗಿ ಅರ್ಜಿ ಸಲ್ಲಿಸಿದ್ದರು ಎಂದರೆ ಸದರಿ ರವರನ್ನು ಕೇಸಿನಲ್ಲಿ ಸೇರಿಸಿಕೊಂಡಿರಲಿಲ್ಲ ಎನ್ನುತ್ತಾರೆ. ಅವರು ಅರ್ಜಿ ಸಲ್ಲಿಸಿದ ಕೂಡಲೆ ಅಮಲ್ಜಾರಿ ಕೇಸ್ ಅನ್ನು ನಾವೆ ವಜಾ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸ್ವತ್ತಿನ ಯಾವುದೆ ಭೌತಿಕ ಸ್ವಾಧೀನ ತೆಗೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ. 1 ರಿಂದ 7 ರ ಸ್ವತ್ತುಗಳಲ್ಲಿ ಪುಟ್ಟಲಕ್ಷ್ಮಮ್ಮ, ತುಳಸಮ್ಮ, ಸಾವಿತ್ರಮ್ಮ ನವರಿಗೂ ಹಕ್ಕು ಇದ್ದು, ಅವರಿಗೂ ಭಾಗ ಬರಬೇಕು ಎಂದರೆ ಸರಿಯಲ್ಲ. ವಾದಿಗಳು ಪುಟ್ಟಲಕ್ಷ್ಮಮ್ಮನ ಮಕ್ಕಳು ಎಂದರೆ ಸರಿ. 4 ಮತ್ತು 5 ನೇ ಪ್ರತಿವಾದಿಗಳು ಸಾವಿತ್ರಮ್ಮನ ಮಕ್ಕಳು ಎಂದರೆ ಇರಬಹುದು. 6 ರಿಂದ 8 ನೇ ಪ್ರತಿವಾದಿಗಳು ತುಳಸಮ್ಮನ ಮಕ್ಕಳು ಎಂದರೆ ಇರಬಹುದು. ಬಾಲಕೃಷ್ಣ ರವರು ಅಗ್ರಿಮೆಂಟ್ ಮಾಡಿಕೊಳ್ಳುವ ಸಮಯ ಹುಣಸೂರಿನ ಕರೀಗೌಡರ ಬೀದಿಯಲ್ಲಿ ವಾಸ ಇದ್ದರು. ಜಮೀನಿಗೂ ಹುಣಸೂರಿಗೂ 14 ಕಿ.ಮೀ ಅಂತರ ಇದೆ. ತಿಮ್ಮೇಗೌಡರು ಹುಣಸೂರಿನಲ್ಲಿ ಇದ್ದ ಕಾರಣ ಅಗ್ರಿಮೆಂಟ್ ಆಗುವ ಕಾಲದಲ್ಲಿ ಜಮೀನುಗಳಲ್ಲಿ ಅವರು ವ್ಯವಸಾಯ ಮಾಡುತ್ತಿರಲಿಲ್ಲ, ಅವರ ಸಹೋದರಿಯರು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.